KATK010006132026

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಕೇಸ್ ಸಂ.24/2026**

ಪ್ರಾ.ಸಾ. ಃ **1**

ದೋ.ಸಾ. ಃ **1**

ದಿ.**13.07.2026**

| | |
|---|---|
| ಹೆಸರು | ಃ ರೇಷ್ಮಾ ಬಾನು |
| ಗಂಡನ ಹೆಸರು | ಃ ಮೊಹಮದ್ ಗಫಾರ್ |
| ವಯಸ್ಸು | ಃ **20** ವರ್ಷ |
| ಉದ್ಯೋಗ | ಃ ಬೀಡಿ ಕಟ್ಟುವ ಕೆಲಸ |
| ವಾಸಸ್ಥಳ | ಃ ಗೂಳೂರು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ಚಾ ಸಾ 2 ಜರೀನಾ ಬಾನು ನನ್ನ ಚಿಕ್ಕಮ್ಮ. ಚಾ ಸಾ 4 ಶರೀಫ್ ಮತ್ತು ಚಾ ಸಾ 5 ಇಸ್ಮಾಯಿಲ್ ನನ್ನ ಮಾವಂದಿರು. ಚಾ ಸಾ 6 ಶಬಾನಾ ಬಾನು ನನ್ನ ಅಕ್ಕ. ಚಾ ಸಾ 7 ಜಿಲಾನ್ ನನ್ನ ಅಕ್ಕನ ಗಂಡ. ಚಾ ಸಾ 8 ಅಲ್ಲಾ ಭಕ್ಷ್ ಚಾ ಸಾ 2 ಜರೀನಾ ಬಾನುರವರ ಗಂಡ. ಆರೋಪಿ ನನ್ನ ಗಂಡ. ದಿ.28.07.2016 ರಂದು ನನ್ನ ಮದುವೆ ಆರೋಪಿಯ ಜೊತೆಗೆ ಅರಸೀಕೆರೆಯಲ್ಲಿ ಆಯಿತು. ಆ ಸಮಯದಲ್ಲಿ ನನ್ನ ತಂದೆ ತಾಯಿ ಆರೋಪಿಗೆ ಒಂದು ಉಂಗುರ ಮತ್ತು ವಾಚ್ ಕೊಟ್ಟಿದ್ದರು. ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದೆನು. ನನಗೆ 3 ಮಂದಿ ಮಕ್ಕಳು. ನನ್ನ ಗಂಡ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ನನ್ನ ಗಂಡ ನನಗೆ ಬೈದಿದ್ದಕ್ಕೆ ಊರಿನಲ್ಲಿ ಮಾತುಕತೆ ಆಯಿತು. ಮಾತುಕತೆಯಾದ ನಂತರ ನನ್ನ ಗಂಡ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಸಣ್ಣಪುಟ್ಟ ಜಗಳ ಆಗಿದ್ದಕ್ಕೆ ನಾನು

ಪೋಲೀಸ್ ಠಾಣೆಗೆ ಹೋಗಿದ್ದೆನು.

(ಈ ಹಂತದಲ್ಲಿ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು